

# ವೀರದಾಸನಾದ

**ಕಾಕೋಳು ಸರೋಜಮ್ಮ**

ವಿಜಯನಗರದ ಸಾಮ್ರಾಜ್ಯದಲ್ಲಿ ಪಂಕಾಪುರ ಪ್ರಾಂತ್ಯದ ಮುಖ್ಯ ಪಟ್ಟಣದ ಹೆಸರು ಬಾಡ ಎಂದು. ಬಾಡ ಒಳ್ಳೆ ಆಯಕಟ್ಟಿನ ಸ್ಥಳ. ಈ ಬಂಕಾಪುರ ಪ್ರಾಂತ್ಯಕ್ಕೆ ಡಣ್ಣಾಯಕ, ಬೀರಪ್ಪನಾಯಕ, ಡಣ್ಣಾಯಕ ಎಂದರೆ ಆಯಕಟ್ಟಿನ ಸ್ಥಳದಲ್ಲಿ ಕಾದಿಟ್ಟ ಸೈನದ ದಳಕ್ಕೆ ಸೇನಾಪತಿ ಎಂದು ನೇಮಿಸಲ್ಪಟ್ಟವನು.

ಬೀರಪ್ಪನ ಹೆಂಡತಿ ಬಚ್ಚಮ್ಮ ಬೀರಪ್ಪನಾಯಕನಿಗೆ ತಿರುಪತಿ ತಿಮ್ಮಪ್ಪನಲ್ಲಿ ಬಹು ನಂಬಿಕೆ. ಬೀರಪ್ಪ ನಾಯಕ ಮತ್ತು ಬಚ್ಚಮ್ಮನವರಿಗೆ ಅನೇಕ ದಿನಗಳಿಂದ ಒಂದು ಹಂಬಲವಿತ್ತು. ತಮಗೆ ಒಬ್ಬ ಕುಲದೀಪಕನಾದ ಮಗ ಜನಿಸಬೇಕೆಂದು. 'ವಂಶೋದ್ಧಾರಕನಾದ ಒಬ್ಬ ಮಗನನ್ನು ಕರುಣಿಸು' ಎಂದು ಈ ದಂಪತಿಗಳು ತಿರುಪತಿ ತಿಮ್ಮಪ್ಪನಿಗೆ ಹರಕೆ ಹೊತ್ತಿದ್ದರು.

ಅವರ ಆಸೆ ಫಲಿಸಿತು. ಬೀರಪ್ಪನಾಯಕ ಮತ್ತು ಬಚ್ಚಮ್ಮನವರಿಗೆ ಒಬ್ಬ ಮಗ ಜನಿಸಿದ. ತಂದೆ ತಾಯಿಗಳಿಗೆ ಸಂತೋಷವೋ ಸಂತೋಷ. ತಿರುಪತಿ ತಿಮ್ಮಪ್ಪನ ಆಶೀರ್ವಾದ ಎಂದು ಅವರು ತಮ್ಮ ಮಗುವಿಗೆ 'ತಿಮ್ಮಪ್ಪ' ಎಂದೇ ನಾಮಕರಣ ಮಾಡಿದರು. ತಿಮ್ಮಪ್ಪ ನಾಯಕ ಒಬ್ಬ ಸೇನಾಧಿಪತಿಯ ಮಗನಾಗಿ ಜನಿಸಿದನಷ್ಟೆ. ಪಾಳ್ಯದಲ್ಲಿಯೇ ಅಕ್ಷರಾಭ್ಯಾಸ ವ್ಯಾಕರಣಗಳ ಜೊತೆಗೆ ಕತ್ತಿ ಒರಸೆ, ಕುದುರೆ ಸವಾರಿಯನ್ನೂ ಕಲಿತ. ಕೆಲವು ವರ್ಷಗಳಲ್ಲಿ ಬೀರಪ್ಪನಾಯಕ ಮತ್ತು ಬಚ್ಚಮ್ಮ ತೀರಿಕೊಂಡರು.

ತಂದೆಯ ಬಳಿಕ ತಿಮ್ಮಪ್ಪ ನಾಯಕ ತನ್ನ ಕಿರಿ ವಯಸ್ಸಿನಲ್ಲಿಯೇ ಬಂಕಾಪುರ ಪ್ರಾಂತ್ಯಕ್ಕೆ ಡಣ್ಣಾಯಕನಾದ. ತಿಮ್ಮಪ್ಪನಾಯಕ ಸ್ವಭಾವದಿಂದ ಬಲು ಉದಾರಿ. ತನ್ನ ಗಳಿಕೆಯನ್ನೆಲ್ಲಾ ಬಡಬಗ್ಗರಿಗೆ ಹಂಚುವುದರಲ್ಲಿ ಆತನಿಗೆ ಬಹು ಸಂತೋಷ. ಒಂದು ಸಲ ಆತ ತನಗಾಗಿ ಒಂದು ಹೊಸ ಮನೆಯನ್ನು ಕಟ್ಟಿಕೊಳ್ಳಬೇಕು ಎಂದು ಒಂದು ಸ್ಥಳ ಆಯ್ದುಕೊಂಡ. ಮನೆ ಕಟ್ಟಲು ಅಡಿಪಾಯ ತೋಡುವಾಗ ಭೂಮಿಯಲ್ಲಿ ಶ್ರೀ ಆದಿಕೇಶವ (ಕೆಲವರ ಅಭಿಪ್ರಾಯ) ಬೆಳ್ಳಿ, ಬಂಗಾರ, ವಜ್ರ, ವೈಡೂರ್ಯಗಳಿಂದ ತುಂಬಿದ ಕೊಪ್ಪರಿಗೆಯೊಂದು ಕಂಡಿತು. ಅಪಾರ ಸಂಪತ್ತು ತಿಮ್ಮಪ್ಪ ನಾಯಕನ ಕೈ ಸೇರಿತು. ತನ್ನ ಅದೃಷ್ಟದಿಂದಾಗಿ ದೊರಕಿದ ಆ ಕೊಪ್ಪರಿಗೆಯಲ್ಲಿನ ಧನ ಕನಕವನ್ನೆಲ್ಲಾ ತಿಮ್ಮಪ್ಪನಾಯಕ ಬಡ ಬಗ್ಗರಿಗೆ ದಾನ ಮಾಡಿದ. ಈ ದಾನ ಶೂರತ್ವವನ್ನು ಕಂಡು ಜನರು ಕನಕನಾಯಕನೆಂದು ಕರೆಯಲಾಗಿ ಆ ಅಡ್ಡ ಹೆಸರೇ ಗಟ್ಟಿಯಾಗಿ ಉಳಿದುಕೊಂಡಿತು.

**ಚಂದ್ರಿಕಾ, 22, 16ನೇ ಅಡ್ಡರಸ್ತೆ, 6ನೇ ದೇವಾಲಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 03**
✆ : 23315812



ತನಗೆ ಕೊಪ್ಪರಿಗೆ ದೊರೆತದ್ದು ಕೇಶವನ ದಯದಿಂದಲೇ ಎಂದು ಕನಕನಾಯಕ ಭಾವಿಸಿದ. ದೇವರಿಗೆ ಒಂದು ದೇವಾಲಯವನ್ನು ಕಟ್ಟಿಸಬೇಕೆಂದು ಆತ ಬಯಸಿದ. ಬಾಡವು ಹೆದ್ದಾರಿಯಲ್ಲಿದ್ದುದರಿಂದ ಬಹಮನಿ ಸುಲ್ತಾನರು ಆಗಾಗ ಬಾಡದ ಮೇಲೆ ಧಾಳಿ ಮಾಡುತ್ತಿದ್ದರು. ಇವರ ಕಿರುಕುಳದಿಂದ ದೇವಾಲಯಕ್ಕೆ ಹಾನಿ ತಟ್ಟೀತು ಎನಿಸಿತು. ಶ್ರೀ ಆದಿಕೇಶವನ ದೇವಾಲಯವನ್ನು ಬಾಡದಲ್ಲಿ ಕಟ್ಟಿಸದೆ ಸಮೀಪದಲ್ಲಿಯೇ ಸೌಂದರ್ಯದ ಬೀಡಾಗಿದ್ದ ಕಾಗಿನೆಲೆ ಎಂಬ ಊರಿನಲ್ಲಿ ಕಟ್ಟಿಸಿದನು.

ಕನಕ ನಾಯಕನಿಗೆ ಕೇಶವ ಆಗಾಗ ಕನಸಿನಲ್ಲಿ ಕಂಡು, 'ಕನಕಾ, ನನ್ನ ದಾಸನಾಗು, ನನ್ನ ದಾಸನಾಗು' ಎಂದು ಆದೇಶ ನೀಡುತ್ತಿದ್ದನು. ಆದರೆ ಡಣ್ಣಾನಾಯಕನಾದ ಕನಕನಾಯಕ ಕೈಯಲ್ಲಿ ಕತ್ತಿ ಹಿಡಿದು ವೈರಿಗಳನ್ನು ಸದೆ ಬಡಿಯುವುದನ್ನು ಬಿಟ್ಟು ತಂಬೂರಿ ಮೀಟುತ್ತಾ ಭಿಕ್ಷೆ ಬೇಡಿ ತಿನ್ನುವ ದಾಸನಾಗಲೇ ನಾನು ಎಂದಿಗೂ ಸಾಧ್ಯವಿಲ್ಲ.

ಆದರೆ ಭಗವಂತನ ಇಚ್ಛೆಗೆ ಎದುರುಂಟೇ ಒಂದು ಸಲ ಶತ್ರು ಸೈನ್ಯ ಕನಕನಾಯಕನ ಪಾಳಯವನ್ನು ಮುತ್ತಿಗೆ ಹಾಕಿತು. ಕನಕ ನಾಯಕ ಜೀವದ ಮೇಲಿನ ಆಸೆ ಬಿಟ್ಟು ಹೋರಾಡಿದ. ಆತನ ಸೈನಿಕರೆಲ್ಲಾ ಹೋರಾಡಿ ಮಡಿದರು. ಸ್ವತಃ ಕನಕ ನಾಯಕನಿಗೂ ಏಟುಗಳು ಬಿದ್ದವು. ಆತ ರಣರಂಗದಲ್ಲಿ ಅರೆಜೀವವಾಗಿ ಬಿದ್ದಿದ್ದ. ಆಗ ಆತನಿಗೆ ಅಶರೀರವಾಣಿ ಕೇಳಿಸಿತು. 'ಕನಕಾ, ಈಗಲಾದರೂ ಹೇಳು, ನನ್ನ ದಾಸನಾಗುವಿಯಷ್ಟೇ?' ರಾಜವೈಭವ ಒಂದು ಕಡೆಯಾದರೆ, ತಂಬೂರಿ ಮಿಡಿತ, ವೈರಾಗ್ಯದ ಕಾವಿಬಟ್ಟೆ, ಭಿಕ್ಷಾಟನೆ ಹರಿದಾಸತ್ವದ ಈ ಲಕ್ಷಣಗಳು ಇನ್ನೊಂದು ಕಡೆಗೆ. 'ಕನಕಾ, ಬೇಗ ಹೇಳು, ಈಗಲಾದರೂ ನನ್ನ ದಾಸನಾಗುವಿಯಷ್ಟೇ?' ಅಶರೀರವಾಣಿಯ ಮತ್ತೆ ಮತ್ತೆ ಅದೇ ಧ್ವನಿ ಕನಕ ನಾಯಕನಿಗೆ ಒಮ್ಮೆಲೇ ಹೊಳೆಯಿತು.

ತಾನು ಡಣ್ಣಾಯಕನಾಗಿರುವುದಕ್ಕಿಂತಲೂ ದಾಸನಾಗಿ ಬಾಳುವುದೇ ದೇವರ ಸಂಕಲ್ಪವಿದ್ದಂತಿದೆ. ಬಹುಶಃ ದಾಸನಾಗುವುದರಿಂದಲೇ ನನ್ನ ಜೀವನ ಸಾರ್ಥಕವಾಯಿತು. ಕನಕ ನಾಯಕ ತನಗರಿವಿಲ್ಲದಂತೆಯೇ ನುಡಿದ. ಕೇಶವ ನಾನು ದಾಸನಾಗುವೆ ನಾನು ನಿನ್ನ ದಾಸನಾಗುವೆ ನನ್ನದು ಒಂದೇ ಒಂದು ಬೇಡಿಕೆ ನಾನು ಕರೆದ ಕೂಡಲೆ ನೀನು ನನಗೆ ದರ್ಶನವನ್ನು ದಯಪಾಲಿಸಬೇಕು. ನಾನು ಇಷ್ಟ ಪಡುವ ರೂಪದಲ್ಲಿ ನೀನು ಕಾಣಿಸಿಕೊಳ್ಳಬೇಕು.

'ತಥಾಸ್ತು' ಎಂದಿತು ಅಶರೀರವಾಣಿಯ ಪ್ರತಿಧ್ವನಿ. ಕನಕನಾಯಕನ ಮೈಮೇಲಿನ ಗಾಯಗಳ ಮೇಲೆ ಯಾರೋ ಪ್ರೀತಿಯಿಂದ ಕೈ ಸವರಿದಂತಾಯಿತು. ಸ್ವಲ್ಪ ಸಮಯದಲ್ಲಿಯೇ ಆತನ ಗಾಯಗಳು ಮಾಯವಾದವು. ಆತ ಚೇತರಿಸಿಕೊಂಡು ಎದ್ದ. ಆತ ಗಾಯಗೊಂಡು ಬಿದ್ದದ್ದು ಕನಕನಾಯಕನಾಗಿ ಆತನ ಗಾಯಗಳು ಮಾಯವಾಗಿ ಆತ ಎದ್ದದ್ದು ಕನಕದಾಸನಾಗಿ.

ಮುಖಪುಟ ಲೇಖನ

# ವಂದಿಸುವೆನು ವಿಶ್ವಪದಾಶ್ರಯನನ್ನು

**ಉಡುಪಿ ರಾಮನಾಥ ಆಚಾರ್ಯ, ಶತಾವಧಾನೀ**

**ವಿ**ಶ್ವಪದಾಶ್ರಯ ಶಬ್ದದ ಅರ್ಥಗಳನ್ನು ತಿಳಿದಾಗ ಮುಖಪುಟದವನ ಮುಖ ಸ್ಫುಟಗೊಳ್ಳುವುದು. ಅಷ್ಟಾಕ್ಷರ ಮಂತ್ರ ಅರಿವಿಗೆ ಸಿಗುವುದು.

೧. ನಮಗೆ ಎಚ್ಚರವನ್ನೀವ ಭಗವಂತನ ರೂಪಕ್ಕೆ ವಿಶ್ವ ಎಂದು ಹೆಸರು. ಪದ ಎಂದರೆ ಪಾದವೂ ಹೌದು. ಈ ವಿಶ್ವರೂಪನ ಉಪಾಸನೆಗೈಯುತ್ತ ವಿಶೇಷವಾಗಿ ವಿಶ್ವನ ಪಾದವನ್ನು ಆಶ್ರಯಿಸಿದವ ಗಣಪತಿ.

೨. ಎಚ್ಚರದ ದೇವನಿಗೆ ಆನೆಯ ಮೋರೆ ಇದೆ. ಪದ ಎಂದರೆ ರೂಪವೂ ಹೌದು. ವಿಶ್ವ ಎಂಬ ಆನೆಮೋರೆಯ ದೇವರ ರೂಪ ವಿಶೇಷವಾಗಿ ಸನ್ನಿಧಾನ ಪಡೆದಿರುವ ದೇವತೆ ಗಣಪತಿ; ವಿಶ್ವಪದಕ್ಕೆ ತಾಣನೆನಿಸಿದವ.

೩. ಬಹುಜಾಗವನ್ನು ವ್ಯಾಪಿಸಿ ಹೋಗುವ ಮೂಲಕ ಆನೆಯನ್ನು ವಿಶ್ವ ಎಂದು ಕರೆಯಬಹುದು. ಆನೆಯ ದೇಹವನ್ನು ಹೊತ್ತವ ಎಂಬರ್ಥದಲ್ಲಿಯೂ ಗಣಪತಿ ವಿಶ್ವಪದಾಶ್ರಯ.

೪. ಜನಪದ ಎಂದಂತೆ ವಿಶ್ವಪದ. ಎಲ್ಲ ಜನರಿಗೂ ಬದುಕಲು ಆಕಾಶ - ಅವಕಾಶ ಬೇಕು. ಅದನ್ನಿತ್ತವನೀತ ಗಣಪತಿ ವಿಶ್ವಪದಾಶ್ರಯ.

೫. ಎಲ್ಲೆಡೆ ಸಂಚರಿಪ ವಾಯುವೂ ವಿಶ್ವ. ವಾಯುದೇವನಲ್ಲಿ ಆಸರೆ ಪಡೆದವನೀತ ದೀರ್ಘ ಶ್ವಾಸೋಚ್ಛ್ವಾಸದ ಸೊಂಡಿಲು ಹೊತ್ತವ. ಹೀಗೆ ವಿಶ್ವಪದಾಶ್ರಯ ಗಣಪ.

೬. ವಿಶ್ವ ಎಂದರೆ ಸರ್ವ. ಶರ್ವನೆ ಸರ್ವನೂ ಹೌದು. ಅಂತಹ ಶಿವಪದವನ್ನು ನಂಬಿ ಬಂದವ ಗಣಪ ವಿಶ್ವಪದಾಶ್ರಯಂ.

೭. ಎಲ್ಲ ಶಬ್ದಗಳ ಅಭಿವ್ಯಕ್ತಿಗೆ ಆಸರೆ ಯೆನಿಸಿದ ಆಕಾಶನೀತ ವಿಶ್ವಪದಾಶ್ರಯ.

೮. ಸಾಧಕರೆಲ್ಲರ ಮೊದಲ ಪದಕ್ಕೆ ಗೋಚರನಾಗುವ ಮೂಲಕ ಗಣಪತಿ ವಿಶ್ವಪದಾಶ್ರಯ.

ಅಷ್ಟಾಕ್ಷರ ಮಂತ್ರದ ಅಷ್ಟೂ ಅರ್ಥ ತಿಳಿದು ಜಪಿಸುವವನಿಗೆ ಇಷ್ಟಾರ್ಥ ಕಷ್ಟವಿಲ್ಲದೆ ಲಭಿಸುವುದು.

**'ಶ್ರೀ ಭಾಗವತಮ್', ಮ. ನಂ. 1-146, ಮುಚ್ಲುಕೋಡು, ಉಡುಪಿ**

ಭಗವದ್ಭಕ್ತರೂ, ಹಿರಿಯ ನಾಗರಿಕರೂ, ಸಾಹಿತ್ಯ ಮತ್ತು ಸಂಸ್ಕೃತಿ ಚಿಂತಕರೂ ಆದ ಶ್ರೀ **ನಾಣ್ಯಾಪುರ ಹನುಮಂತ ಶೆಟ್ಟರು** ರಾಮನಗರ ಹಗರಿಬೊಮ್ಮನಹಳ್ಳಿ, ಇವರು **ಸುಗುಣಮಾಲಾ** ಆಧ್ಯಾತ್ಮ ಪತ್ರಿಕೆಗಳನ್ನು ಪ್ರತಿ ತಿಂಗಳು 20ರಂತೆ ಉಚಿತವಾಗಿ ಹಂಚಿ ಗೀತಾರಾಧನೆ ಮಾಡುತ್ತಿದ್ದಾರೆ. ಇವರಿಗೆ ಶ್ರೀಕೃಷ್ಣ ಪರಮಾತ್ಮನು ಆಯುರಾರೋಗ್ಯ ಭಾಗ್ಯ ಸಕಲ ಸಂಪತ್ತು ಕೊಡಲಿ ಎಂದು **ಸುಗುಣ ಬಳಗ** ಶುಭ ಹಾರೈಸುತ್ತದೆ.

ಮಾರ್ಚ್ ತಿಂಗಳ ಸುಗುಣಮಾಲಾ ಸಂಚಿಕೆಯಲ್ಲಿ

**'ಮಲಗಿ ಪರಮಾದರದಲಿ ಪಾಡಲು ಕುಳಿತು ಕೇಳುವ,**<br>
**ಕುಳಿತು ಪಾಡಲು ನಿಲುವ, ನಿಂತರೆ ನಲಿವ,**<br>
**ನಲಿದರೆ ಒಲಿವ ಸುಲಭನೋ ಹರಿ ಸುಲಭನೋ'**

ಎಂಬ ಕೀರ್ತನೆಯ ಕರ್ತೃ ಶ್ರೀಕನಕದಾಸರೆಂದು ತಪ್ಪಾಗಿ ನಮೂದಿಸಲ್ಪಟ್ಟದ್ದು ಅದು ವಾಸ್ತವವಾಗಿ ಶ್ರೀ ಜಗನ್ನಾಥ ದಾಸರ ಕೃತಿ ಎಂಬುದಾಗಿ ಬಿಜಾಪುರ ಯುವ ಲೇಖಕರ ವೇದಿಕೆಯ ಶ್ರೀ **ಕೇಶವ ಉಮರ್ಜಿ,** ಎಂ. ಎ. ತೋರಿಸಿಕೊಟ್ಟಿದ್ದಾರೆ. ತಪ್ಪಿಗಾಗಿ ವಿಷಾದಿಸುತ್ತೇವೆ.

**- ಸಂಪಾದಕ**